8)	ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು	-	1,28,208
9)	ಹಣಕಾಸು ಸಚಿವರು	-	1,03,371
10)	ಸಣ್ಣ ಕೈಗಾರಿಕಾ ಸಚಿವರು	-	44,177
11)	ಸಣ್ಣ ನೀರಾವರಿ ರಾಜ್ಯ ಸಚಿವರು	-	90,000
12)	ಪಶುಸಂಗೋಪನಾ ರಾಜ್ಯ ಸಚಿವರು	-	2,59,645
13)	ಆರೋಗ್ಯ ಸಚಿವರು	-	43,030
	ಒಟ್ಟು		2,34,328

ಬೆಂಗಳೂರು ಮಹಾನಗರದ ವರ್ತುಲ ರಸ್ತೆಗಳ ಬಗ್ಗೆ

86 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರದ ಸುತ್ತ ನಿರ್ಮಾಣದ ಹಂತದಲ್ಲಿರುವ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿ ಕೊಡಲು ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆಯೇ, ಹಾಗಿದ್ದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ ?

ಆ) ಈ ವರ್ತುಲ ರಸ್ತೆಯ ಇಕ್ಕೆಲಗಳಲ್ಲಿ ಲಭ್ಯವಿರುವ ಜಾಗವನ್ನು ಲಾಭದಾಯಕವಾಗಿ, ವ್ಯಾಪಾರ, ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲು ಸರ್ಕಾರ ಮುಕ್ತ ಅವಕಾಶವನ್ನು ಕಲ್ಪಿಸಿ ಕೊಟ್ಟಿದೆಯೇ ?

ಇ) ನಿಯೋಜಿತ ವರ್ತುಲ ರಸ್ತೆ ಎಷ್ಟು ಕಿ.ಮೀ. ಇದರಲ್ಲಿ ಬಿ.ಡಿ.ಎ. ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಪೂರೈಸಿದೆ ?

ಈ) ಕರ್ನಾಟಕ ನಿರ್ಮಾಣ ನಿಗಮ ಅಥವಾ ಭೂ ಸೇನೆ ನಿಗಮಕ್ಕೆ ವರ್ತುಲ ರಸ್ತೆ ನಿರ್ಮಿಸುವ ಅವಕಾಶ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಶ್ರೀ ಆರ್. ರೋಷನ್‌ಬೇಗ್ (ಬೆಂಗಳೂರು ನಗರಾಭಿವೃದ್ಧಿ ಹಾಗೂ ವಕ್ಫ್ ರಾಜ್ಯ ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಯುಡಿ 20 ಎಂಎನ್‌ಜಿ 95 ದಿನಾಂಕ 4-5-95ರಲ್ಲಿ ಹೊರ ವರ್ತುಲ ರಸ್ತೆಯ ಕಾಮಗಾರಿಯನ್ನು ಖಾಸಗಿಯವರಿಗೆ ವಹಿಸಿಕೊಡಲು ಪರವಾನಗಿ ನೀಡಲಾಗಿದೆ. ಇಲ್ಲಿಯವರೆಗೆ ಈ ಕೆಲಸವನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುವುದಿಲ್ಲ. ಪ್ರಾಧಿಕಾರದಿಂದ ಖಾಸಗಿಯವರ ಪೂರ್ವಾರ್ಹತೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

ಆ) ಮೇಲೆ ತಿಳಿಸಿರುವ ಸರ್ಕಾರಿ ಆದೇಶಾನ್ವಯ ಹಳೇ ಮದರಾಸು ರಸ್ತೆ ಮತ್ತು ಸರ್ಜಾಪುರ ರಸ್ತೆ ನಡುವಿನ 12.20 ಕಿ.ಮೀ. ಉದ್ದದ ವರ್ತುಲ ರಸ್ತೆಯ ಇಕ್ಕೆಲಗಳ ಜಾಗವನ್ನು ಖಾಸಗಿಯವರು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

ಇ) 62.09 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡಲು ಯೋಜಿಸಲಾಗಿದ್ದು, ಅದರಲ್ಲಿ 36.41 ಕಿ.ಮೀ. ಉದ್ದದ ರಸ್ತೆಯ ಕೆಲಸವನ್ನು

ಪ್ರಾಧಿಕಾರದಿಂದ ಕೈಗೊಳ್ಳಲಾಗಿದೆ. 19.76ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣಗೊಳಿಸಲಾಗಿದೆ. ಈ ಭಾಗದ ರಸ್ತೆಯನ್ನು ಕೂಡ ಬಲಪಡಿಸಿ ಅಭಿವೃದ್ಧಿ ಮಾಡಬೇಕಾಗಿದೆ.

ಈ) ಸರ್ಕಾರಿ ಆದೇಶ ಸಂ: ಪಿಡಬ್ಲ್ಯೂ ಡಿ:174:ಸಿಎನ್‌ಆಥ್:95 ದಿನಾಂಕ 14-11-95ರ ಪ್ರಕಾರ ಮೈಸೂರು ರಸ್ತೆಯ ಜಂಕ್ಷನ್‌ನಿಂದ ಹೊಸೂರು ರಸ್ತೆಯ ಜಂಕ್ಷನ್‌ವರೆವಿಗೆ ಹೊಸ ವರ್ತುಲ ರಸ್ತೆಯ ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಅವರಿಗೆ ವಹಿಸಲಾಗಿದೆ.

ರಾಜ್ಯದ ಆರ್ಥಿಕ ಸ್ಥಿತಿಗಳ ವಿವರ

89 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *15ನೇ ಜನವರಿ 1996 ರಂದು ಕರ್ನಾಟಕ ಸರ್ಕಾರದ ಆರ್ಥಿಕ ಸ್ಥಿತಿಗತಿಗಳ ವಿವರಗಳೇನು?*

(ಬ್ಯಾಂಕ್ ಬ್ಯಾಲೆನ್ಸ್, ಟ್ರೈಜರಿ ಬ್ಯಾಲೆನ್ಸ್ ಇತ್ಯಾದಿ ವಿವರ ನೀಡಿ).

ಆ) *15-1-1996ರ ವರೆಗೆ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ. 1994-95 ಹಾಗೂ 1995-96ರಲ್ಲಿ ಎಷ್ಟು ಓವರ್ ಡ್ರಾಫ್ಟ್ ಪಡೆಯಲಾಗಿದೆ.*

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು) :

ಅ) ದಿನಾಂಕ: 15-1-1996 ರಂದು ಕರ್ನಾಟಕ ಸರ್ಕಾರವು 6.46 ಕೋಟಿ ರೂಪಾಯಿಗಳ ಅರ್ಥೋಪಾಯ ಮುಂಗಡವನ್ನು ಪಡೆದಿದೆ.

ಆ) 1995-96ನೇ ಸಾಲಿನಲ್ಲಿ ದಿನಾಂಕ: 15-1-96ರ ವರೆಗೂ ಯಾವುದೇ ಓವರ್ ಡ್ರಾಫ್ಟ್‌ನ್ನು ರಾಜ್ಯ ಸರ್ಕಾರವು ಪಡೆದಿಲ್ಲ.

ಪ್ರಕಟಣೆಗಳು

20.2.96ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

1994-95ನೇ ಸಾಲಿನಲ್ಲಿ ರೂ. 4,46,69,71000 (ರೂ. ನಾಲ್ಕೂನೂರ ನಲವತ್ತಾರು ಕೋಟಿ ಅರವತ್ತೊಂಬತ್ತು ಲಕ್ಷ ಎಪ್ಪತ್ತೊಂದು ಸಾವಿರಗಳು ಮಾತ್ರ)ಗಳ ಸಂಚಿತ (Cumulative) ಓವರ್ ಡ್ರಾಫ್ಟ್ ಪಡೆಯಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರ ರಾಜೀನಾಮೆ

ಬೆಂಗಳೂರು ನಗರ ಚಿಕ್ಕಪೇಟೆ ಕ್ಷೇತ್ರದಿಂದ 10ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಡಾ|| ಜೀವರಾಜ್ ಆಳ್ವರವರು ವಿಧಾನ ಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಯನ್ನು ದಿನಾಂಕ 17-2-96ರಂದು ಅಂಗೀಕರಿಸಲಾಗಿದೆ.

ಸಭೆಯ ಮುಂದಿಡಲಾದ [illegible]ಗಳು

ದಿನಾಂಕ 20-2-1996 ರಂದು ನಡೆದ ಸಭೆಯ [illegible] ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆ[illegible]ನ್ನು ನಡೆಸಲು ತೀರ್ಮಾನಿಸಲಾಯಿತು.